# ಅಡ್ವಾನ್ಸ್ಡ್ ಪಾರ್ಕಿನ್‌ಸನ್ಸ್ ಖಾಯಿಲೆಗೆ : ಡೀಪ್ ಬ್ರೇನ್ ಸ್ಟಿಮ್ಯೂಲೇಷನ್

**'ಶೇಕಿಂಗ್ ಪಾಲ್ಸಿ' ಎಂದು ಸಾಮಾನ್ಯವಾಗಿ ಪ್ರಚಲಿತವಾಗಿರುವ ಈ ಖಾಯಿಲೆ, ನಡುಕ (ಕೈಗಳು ಹಾಗೂ ಕಾಲುಗಳು ಅಲುಗಾಡುವುದು), ಬಿಗಿತ (ಬಿರುಸುತನ), ಎಲ್ಲಾ ಚಲನೆಗಳು ನಿಧಾನಗೊಳ್ಳುವುದು, ಮುಖದಲ್ಲಿ ಭಾವನೆಗಳ ಮಾಯ ಹಾಗೂ ಭಂಗಿ, ಸಮತೋಲನ ಮತ್ತು ನಡಿಗೆಯಲ್ಲಿ ಅಡಚಣೆಗಳು ಸೇರಿದಂತೆ, ದೇಹದ ಚಲನೆಗೆ ಸಂಬಂಧಿಸಿದ ಅಸ್ವಸ್ಥತೆಯನ್ನು ಉಂಟು ಮಾಡುತ್ತದೆ.**



**ಡಾ|| ವೆಂಕಟರಮಣಾ ಎನ್ ಕೆ**
ಮುಖ್ಯ ನರರೋಗ ಶಸ್ತ್ರಚಿಕಿತ್ಸಕರು

**ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್**
*– ಸೂಪರ್ ಸ್ಪೆಷಾಲಿಟಿ ಕ್ವಾಟರ್ನರಿ ಕೇರ್*

**ಪಾ**ರ್ಕಿನ್‌ಸನ್ಸ್ ಖಾಯಿಲೆ ಎಂದರೆ ಪ್ರಗಾಮಿ, ಕ್ಷೀಣಗೊಳ್ಳುವ, ದೇಹದ ಚಲನೆಯ ಅಸ್ವಸ್ಥತೆ. ಈ ಖಾಯಿಲೆ ಸಾಮಾನ್ಯವಾಗಿ ಪ್ರತಿ 10,000 ಜನರ ಪೈಕಿ ಒಬ್ಬರಲ್ಲಿ ಕಂಡು ಬರುವ ಸಾಧ್ಯತೆಯಿದೆ. 'ಶೇಕಿಂಗ್ ಪಾಲ್ಸಿ' ಎಂದು ಸಾಮಾನ್ಯವಾಗಿ ಪ್ರಚಲಿತವಾಗಿರುವ ಈ ಖಾಯಿಲೆ, ನಡುಕ (ಕೈಗಳು ಹಾಗೂ ಕಾಲುಗಳು ಅಲುಗಾಡುವುದು), ಬಿಗಿತ (ಬಿರುಸುತನ), ಬ್ರಾಡಿಕೈನೆಸಿಯ (ಎಲ್ಲಾ ಚಲನೆಗಳು ನಿಧಾನಗೊಳ್ಳುವುದು), ಮುಖದಲ್ಲಿ ಭಾವನೆಗಳ ಮಾಯ ಹಾಗೂ ಭಂಗಿ, ಸಮತೋಲನ ಮತ್ತು ನಡಿಗೆಯಲ್ಲಿ ಅಡಚಣೆಗಳು ಸೇರಿದಂತೆ, ದೇಹದ ಚಲನೆಗೆ ಸಂಬಂಧಿಸಿದ ಅಸ್ವಸ್ಥತೆಯನ್ನು ಉಂಟು ಮಾಡುತ್ತದೆ.

ಸಾಧಾರಣವಾಗಿ ಈ ಖಾಯಿಲೆ 50 ವರ್ಷಗಳಿಗಿಂತ ಹೆಚ್ಚಿನ ವಯೋಮಾನದ ಜನರಲ್ಲಿ ಕಂಡು ಬಂದರೂ, ಚಿಕ್ಕ ವಯಸ್ಸಿನವರಲ್ಲಿಯೂ ಈ ಸಮಸ್ಯೆ ಉಂಟಾಗುವ ಸಾಧ್ಯತೆಗಳಿವೆ. ಈ ಖಾಯಿಲೆ ಆರಂಭಿಕ ಮತ್ತು ಸುಮಾರಾಗಿ ಮುಂದುವರೆದ ಹಂತದಲ್ಲಿರುವಾಗ ಹಲವು ವೈದ್ಯಕೀಯ ಚಿಕಿತ್ಸೆಗಳು ಲಭ್ಯವಿದೆಯಾದರೂ, ಮುಂದುವರೆದ ಹಂತದಲ್ಲಿರುವಾಗ ಅವುಗಳ ಪರಿಣಾಮ ಸೀಮಿತ. ಅಂದರೆ, ಕೇವಲ ಲಕ್ಷಣಗಳಲ್ಲಿ ಪರಿಹಾರ ಹಾಗೂ ಜೀವನದ ಗುಣಮಟ್ಟದಲ್ಲಿ ಯಾವುದೇ ಸುಧಾರಣೆಯಿರುವುದಿಲ್ಲ. ಈ ಚಿಕಿತ್ಸೆಯ ದೀರ್ಘಾವಧಿ ಬಳಕೆ, ಹೆಚ್ಚಿನ ಔಷಧಗಳ ಸೇವನೆ ಮತ್ತು ಎದುರು ಪರಿಣಾಮಗಳನ್ನು ಉಂಟು ಮಾಡುವ ಸಾಧ್ಯತೆಗಳನ್ನು ಒಳಗೊಂಡಿದ್ದು, ಈ ಕಾರಣದಿಂದಾಗಿ ಈ ಚಿಕಿತ್ಸೆಯ ಲಾಭಗಳು ಕಡಿಮೆಯಾಗುವ ಸಂಭವವಿರುತ್ತದೆ.

**ಡೀಪ್ ಬ್ರೇನ್ ಸ್ಟಿಮ್ಯೂಲೇಷನ್ (ಡಿಬಿಎಸ್)**

ಡೀಪ್ ಬ್ರೇನ್ ಸ್ಟಿಮ್ಯೂಲೇಷನ್ ಎಂದರೆ, ಮೆದುಳಿನಲ್ಲಿರುವ, ಆಯ್ಕೆ ಮಾಡಿದ ಗುರಿ ಮಧ್ಯಭಾಗಕ್ಕೆ ಅತೀ ಹೆಚ್ಚಿನ ಆವರ್ತಿತ ಉದ್ದೀಪನವನ್ನು ಒದಗಿಸುವ ವಿಶೇಷ ತಂತ್ರ ಎಂದರ್ಥ. ಈ ವಿಧಾನ, ಥಲಮೊಟೊಮಿ ಹಾಗೂ ಪಲ್ಲಿದೊಟೊಮಿ ಚಿಕಿತ್ಸಾ ವಿಧಾನಗಳಿಗೆ ಪರಿಣಾಮಕಾರಿ ಪರ್ಯಾಯ ಚಿಕಿತ್ಸಾ ವಿಧಾನವಾಗಿದೆ. ಬೇಸಲ್ ಗ್ಯಾಂಗ್ಲಿಯ ಹಾಗೂ ಥಾಲಮಸ್‌ನ ಶರೀರಶಾಸ್ತ್ರಕ್ಕೆ ಸಂಬಂಧಿಸಿದ ಇತ್ತೀಚಿನ ಜ್ಞಾನ ಮತ್ತು ಅರ್ಥ, ಎಲೆಕ್ಟ್ರೊಫಿಸಿಯಾಲಜಿ, ನ್ಯೂರೊ ಇಮೇಜಿಂಗ್, ಸ್ಟೀರಿಯೊಟ್ಯಾಕ್ಟಿಕ್ ನ್ಯೂರೊಸರ್ಜರಿ, ಪರಸ್ಪರ ಕಂಪ್ಯೂಟರ್ ಮಾರ್ಗದರ್ಶಿ ಸಾಧನಗಳು ಹಾಗೂ ನರಗಳ ಉದ್ದೀಪನ ಉಪಕರಣಗಳು ಈ ವಿಧಾನವನ್ನು ಯಶಸ್ವಿಗೊಳಿಸಿದೆ.

**ಮೈಕ್ರೊ ಎಲೆಕ್ಟ್ರೋಡ್ ರೆಕಾರ್ಡಿಂಗ್:**

ಮೆದುಳಿನಲ್ಲಿರುವ ಎಲೆಕ್ಟ್ರೋಡ್‌ನ ನಿಖರವಾದ ಸ್ಥಳವನ್ನು ದೃಢಪಡಿಸಲು ಇದು ಒಂದು ರೀತಿಯ ಎಲೆಕ್ಟ್ರೊಫಿಸಿಯಾಲಜಿಕಲ್ ಸಾಧನ. ಇದು, ಮೆದುಳಿನ ಜೀವಕೋಶಗಳ ವಿದ್ಯುತ್ ಚಟುವಟಿಕೆಯನ್ನು ದಾಖಲಿಸುವ ಆಧುನಿಕ ತಂತ್ರವಾಗಿದೆ. ಇದು ಶಸ್ತ್ರಚಿಕಿತ್ಸೆಯನ್ನು ಅತ್ಯಂತ ನಿಖರ, ಸುರಕ್ಷಿತ ಮತ್ತು ಸಂಪೂರ್ಣವಾಗಿ ವೈಜ್ಞಾನಿಕಗೊಳಿಸುತ್ತದೆ.

**ಡಿಬಿಎಸ್‌ನ ಲಾಭಗಳು:**

ನಡುಕ, ಬಿರುಸುತನ, ಎಕಿನೆಸಿಯ, ದೇಹದ ಭಂಗಿ ಅಸ್ಥಿರತೆ ಮತ್ತು ನಡಿಗೆಯಂತಹ ಎಲ್ಲಾ ಕುರುಹಗಳನ್ನೂ ಸುಧಾರಿಸಬಲ್ಲಂತಹ ಏಕೈಕ ಶಸ್ತ್ರಚಿಕಿತ್ಸೆ ಡೀಪ್ ಬ್ರೇನ್ ಸ್ಟಿಮ್ಯೂಲೇಷನ್.

ಪಾರ್ಕಿನ್‌ಸನ್ಸ್ ಖಾಯಿಲೆ ಮುಂದುವರೆದ ಹಂತದಲ್ಲಿದ್ದು, ವೈದ್ಯಕೀಯ ಚಿಕಿತ್ಸೆಯಿಂದ ಅಸಮರ್ಪಕ ಲಾಭ ಪಡೆದಿರುವಂತಹ, ಏರುಪೇರುಗಳು ಗೋಚರಿಸುವ ಮತ್ತು ಡಿಸ್‌ಕೈನೆಸಿಯ ಇರುವಂತಹ ರೋಗಿಗಳಿಗೆ ಈ ಡಿಬಿಎಸ್ ಚಿಕಿತ್ಸೆ ಸೂಕ್ತ. ಈ ಚಿಕಿತ್ಸೆಗೆ ವಯಸ್ಸು ವಿರುದ್ಧ ಸೂಚನೆಯಲ್ಲ – ಆದರೂ ಸಹ ವ್ಯಕ್ತಿ ವೈದ್ಯಕೀಯವಾಗಿ ಸರಿಯಾಗಿರಬೇಕು ಮತ್ತು ಖಿನ್ನತೆ ಅಥವಾ ಡಿಮೆನ್ಷಿಯ (ಬುದ್ಧಿ ಮಾಂದ್ಯತೆ) ಕುರುಹಗಳಿರಬಾರದು. ಡಿಬಿಎಸ್ ಚಿಕಿತ್ಸಾ ವಿಧಾನ ಮೆದುಳಿನಲ್ಲಿ ಯಾವುದೇ ರೀತಿಯ ಹಾನಿಕಾರಕ ಬದಲಾವಣೆಯನ್ನು ಉಂಟು ಮಾಡುವುದಿಲ್ಲ. ಇದು ವೈಯಕ್ತಿಕ ಅಗತ್ಯಗಳಿಗೆ ತಕ್ಕಂತೆ ಪ್ರತಿವರ್ತಿ, ಸರಿಹೊಂದಿಸಬಹುದಾದ ವಿಧಾನ.

**ದೀರ್ಘಾವಧಿ ಅನುಸರಣೆ:**

ನಿರ್ದಿಷ್ಟ ರೋಗಿಗೆ ಪೂರಕವಾದಂತೆ, ಅತ್ಯುತ್ತಮ ಕಾರ್ಯನಿರ್ವಾಹಕ ಫಲಿತಾಂಶವನ್ನು ಸಾಧಿಸಲು, ಡಿಬಿಎಸ್‌ಗೆ ಪ್ರೋಗ್ರಾಮಿಂಗ್ ಮತ್ತು ಉದ್ದೀಪನದ ನಿಯತಾಂಕವನ್ನು ನಿಗದಿಪಡಿಸುವ ಅಗತ್ಯವಿದೆ. ಬೆಂಬಲಿತ ಫಿಸಿಯೊಥೆರಪಿ (ದೇಹದ ವ್ಯಾಯಾಮ) ಹಾಗೂ ಇತರೆ ಸಾಮಾನ್ಯ ಬೆಂಬಲಿತ ಕ್ರಮಗಳು ಹೆಚ್ಚಿನ ಸುಧಾರಣೆಗಳನ್ನು ತರಬಹುದು. ಡಿಬಿಎಸ್ ಬಹುತೇಕ ಕುರುಗಳನ್ನು ಪರಿಹರಿಸಬಲ್ಲದಾದರೂ, ಸಣ್ಣ ಪ್ರಮಾಣದ ಔಷಧಗಳನ್ನು ನೀಡುವುದು ಮುಂದುವರೆಯುತ್ತದೆ.

**ಭರವಸೆಯ ಬೆಳಕು:** ಪಾರ್ಕಿಸನ್ಸ್ ಖಾಯಿಲೆಯಿಂದ ಬಳಲುತ್ತಿರುವ 61 ವರ್ಷ ವಯಸ್ಸಿನ ರಮೇಶ್ (ಹೆಸರು ಬದಲಾಯಿಸಲಾಗಿದೆ) ಎಂಬುವವರು, ಕ್ಷೀಣವಾಗಿರುವ ಚಲನೆಯಿಂದಾಗಿ, ನಡೆಯಲು ಕಷ್ಟವಾಗುತ್ತಿರುವುದು (ಬ್ರಾಡಿಕೈನೆಸಿಯ) ಮತ್ತು ಮುಖ್ಯವಾಗಿ ಕೈಗಳ ನಡುಕದ ಸಮಸ್ಯೆಯೊಂದಿಗೆ ನಮ್ಮಲ್ಲಿಗೆ ವೈದ್ಯಕೀಯ ನೆರವನ್ನು ಕೋರಿ ಬಂದರು. ಇವರು ಕಳೆದ 15 ವರ್ಷಗಳಿಂದ ಈ ಕ್ಷೀಣಗೊಳ್ಳುವ ದೇಹದ ಚಲನೆಗಳ ಲಕ್ಷಣಗಳಿಂದ ನರಳುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಇವರು ಬರೆಯುವ ಸಾಮರ್ಥ್ಯವನ್ನೂ ಕಳೆದುಕೊಂಡಿದ್ದಾರೆ. ಪಾರ್ಕಿನ್‌ಸನ್ಸ್ ಖಾಯಿಲೆಯಿರುವುದು ಪತ್ತೆ ಹಚ್ಚಿದ ನಂತರ, ಇವರ ಪ್ರಾಥಮಿಕ ಚಲನೆಯನ್ನು ಉಳಿಸಿಕೊಳ್ಳುವ ಸಲುವಾಗಿ, ಇವರಿಗೆ ಅತೀ ಹೆಚ್ಚಿನ ಪ್ರಮಾಣದ ಔಷಧಗಳನ್ನು ನೀಡಲಾಗುತ್ತಿದೆ. ಈಗ ಡಿಸ್ಕೆನಿಸಿಯ ಸೇರಿದಂತೆ ಇತರೆ ಅಡ್ಡ ಪರಿಣಾಮಗಳನ್ನು ತಡೆದುಕೊಳ್ಳಲಾಗದಿರುವಷ್ಟರ ಮಟ್ಟಿಗೆ ಇವರು ಸೇವಿಸುವ ಔಷಧಗಳ ಪ್ರಮಾಣ ಹೆಚ್ಚಾಗಿದೆ.

ಆಗ ಅವರು ಎಂತಹ ಪರಿಸ್ಥಿತಿಯಲ್ಲಿದ್ದರೆಂದರೆ ಇವರ ಬಳಿ ಎರಡೇ ಆಯ್ಕೆಗಳಿದ್ದವು; ಔಷಧಗಳ ಸೇವನೆಯ ಜೊತೆಗೆ, ನೋವಿನೊಂದಿಗೆ ಸೀಮಿತ ದೇಹದ ಚಲನೆ ಅಥವಾ ಔಷಧಗಳಿಲ್ಲದೆ ಬಹುತೇಕ ನಿಷ್ಕ್ರಿಯ ಜೀವನ ನಡೆಸುವುದು. ನಾವು ಇವರಿಗೆ ಮೂರನೆಯ ಆಯ್ಕೆಯನ್ನು ನೀಡಿದೆವು: ಅದು ಡಿಬಿಎಸ್ ಅಥವಾ ಡೀಪ್ ಬ್ರೇನ್ ಸ್ಟಿಮ್ಯೂಲೇಷನ್ ಶಸ್ತ್ರಚಿಕಿತ್ಸೆ. ಇದಕ್ಕೆ ರೋಗಿ ಒಪ್ಪಿ, ಸುರಕ್ಷಿತ ಚಿಕಿತ್ಸಾ ವಿಧಾನವನ್ನು ಪಡೆದರು. ಈ ವಿಧಾನದಲ್ಲಿ ಸಬ್ ಥ್ಯಾಲಮಿಕ್ ನ್ಯೂಕ್ಲಿಯಸ್‌ನ ಎರಡೂ ಬದಿಗಳಲ್ಲಿ ಎಲೆಕ್ಟ್ರೋಡ್‌ಗಳನ್ನು ಇರಿಸಲಾಯಿತು ಮತ್ತು ಮೆದುಳಿನ ಬೇಸಲ್ ಗ್ಯಾಂಗ್ಲಿಯ ಸಿಸ್ಟಂನೊಳಗೆ ರಂಧ್ರಗಳ ಮೂಲಕ ಸಣ್ಣ ಲೆನ್ಸ್ ಆಕಾರದ ನ್ಯೂಕ್ಲಿಯಸ್ ಅನ್ನು ಇಟ್ಟು, ಸಬ್‌ಕ್ಯೂಟೇನಿಯಸ್ ಕೇಬಲ್‌ಗಳೊಂದಿಗೆ (ಚರ್ಮದ ಕೆಳಭಾಗದಲ್ಲಿ ವೈರ್‌ಗಳು) ಎದೆಯ ಮೇಲೆ ಬ್ಯಾಟರಿಯನ್ನು ಇಟ್ಟು ಇದಕ್ಕೆ ಸಂಪರ್ಕ ಕಲ್ಪಿಸಲಾಯಿತು. ಶಸ್ತ್ರಚಿಕಿತ್ಸೆಯ ನಂತರ ಮೌಲ್ಯಮಾನವನ್ನು ಆಧರಿಸಿ, ಉದ್ದೀಪನದ ಆವರ್ತನೆ ಮತ್ತು ವೋಲ್ಟೇಜನ್ನು ಸರಿಹೊಂದಿಸಲಾಯಿತು.

ಈ ಚಿಕಿತ್ಸೆಯನ್ನು ಪಡೆದ ನಂತರ, 61 ವರ್ಷದ ತೀವ್ರ ಪಾರ್ಕಿನ್‌ಸನ್ಸ್ ಸಮಸ್ಯೆಯಿರುವ ರೋಗಿಯು ತನ್ನ ದೇಹದ ಎಂದಿನ ಚಲನೆಯನ್ನು ಮರಳಿ ಪಡೆದಿದ್ದಾರೆ ಮತ್ತು ಈಗ ಕೇವಲ ನಡೆಯುವುದಷ್ಟೇ ಅಲ್ಲದೆ, ತಮ್ಮ ವ್ಯಾಪಾರದಲ್ಲಿಯೂ ತೊಡಗಿಕೊಳ್ಳಲು ಸಮರ್ಥರಾಗುವಷ್ಟರ ಮಟ್ಟಿಗೆ ಗುಣಮುಖರಾಗಿದ್ದಾರೆ. ಈಗ ಇವರು ಕ್ರಮಬದ್ಧವಾಗಿ ವೈದ್ಯಕೀಯ ಅನುಸರಣೆಯನ್ನು ಪಡೆಯುತ್ತಿದ್ದು, ಔಷಧಗಳನ್ನು ಪಡೆಯುವುದನ್ನು ನಿಲ್ಲಿಸಿದ್ದಾರೆ.